# ಭೀಮನ ಗರ್ವಭಂಗ

ಧರ್ಮರಾಯನು ದ್ರೌಪದಿ ಮತ್ತು ಸಹೋದರರಾದ ಭೀಮ, ಅರ್ಜುನ, ನಕುಲ, ಸಹದೇವರೊಂದಿಗೆ ಹನ್ನೆರಡು ವರ್ಷ ವನವಾಸದಲ್ಲಿದ್ದನು. ಹಾಗಿರುವಾಗ ಒಮ್ಮೆ ಗಂಧಮಾದನ ಪರ್ವತದಲ್ಲಿದ್ದರು. ಅದು ಮನೋಹರವಾದ ಗಿರಿಪ್ರದೇಶವಾಗಿದ್ದು, ಝುಳ ಝುಳ ಹರಿಯುವ ಜಲಪಾತ, ಝರಿಗಳಿಂದ ಕೂಡಿತ್ತು. ಅಲ್ಲಿ ವಿವಿಧ ಪಕ್ಷಿಗಳ ಕಲರವ ಒಂದು ಗಂಧರ್ವ ಲೋಕವನ್ನು ಸೃಷ್ಟಿಸಿತ್ತು.

ಈಶಾನ್ಯವಾಯು ಬೀಸುತ್ತ ಹೊತ್ತು ತಂದು ಹಾಕಿದ ಒಂದು ಸೌಗಂಧಿಕ ಪುಷ್ಪವನ್ನು ದ್ರೌಪದಿ ನೋಡಿದಳು. ಅದರ ಸೌಂದರ್ಯ, ಕಂಪು, ಬಣ್ಣ ಬೆಡಗಿಗೆ ಮನಸೋತಳು. ಇಂಥಹ ಹೂವುಗಳನ್ನು ತಂದುಕೊಡು ಎಂದು ಭೀಮನನ್ನು ಕೇಳಿಕೊಂಡಳು. ಭೀಮನು ಆ ಗಾಳಿ ಬೀಸಿಬಂದ ದಿಕ್ಕಿನತ್ತ ಸೌಗಂಧಿಕ ಪುಷ್ಪವನ್ನು ಹುಡುಕುತ್ತ ಹೋದನು.

ವಾಯುಪುತ್ರ ಹನುಮಂತನು ಅಹಂಭಾವದಲ್ಲಿದ್ದ ಭೀಮನಿಗೆ ಬುದ್ಧಿ ಕಲಿಸಲು ಒಂದು ಉಪಾಯ ಹೂಡಿದನು. ಅದು ಅವನ ಶಕ್ತಿ ಸಾಮರ್ಥ್ಯ ಪರೀಕ್ಷಿಸಿ ಅವನನ್ನು ತಿದ್ದುವ ಪ್ರಯತ್ನವು ಆಗಿತ್ತು. ಭೀಮನು ನಡೆಯುವ ದಾರಿಯಲ್ಲಿ ತನ್ನ ಬಾಲವನ್ನು ಉದ್ದಕ್ಕೆ ಚಾಚಿ ಕುಳಿತನು. ಅದನ್ನು ನೋಡಿದ ಭೀಮನು ಹೀಗೆ ಕೇಳಿದನು:

‘ಹೇ ವಾನರ, ನನ್ನ ದಾರಿಗೆ ಅಡ್ಡವಾಗಿ ನಿನ್ನ ಬಾಲವನ್ನು ಏಕೆ ಹರಡಿರುವೆ? ಅದನ್ನು ತೆಗೆ’

‘ನಾನು ವೃದ್ಧ. ಏಳಲು ಆಗುವುದಿಲ್ಲ. ಅದನ್ನು ದಾಟಿ ಹೋಗು’ ಎಂದ ಹನುಮಂತ.

‘ನಿನ್ನಲ್ಲಿರುವ ಪರಮಾತ್ಮನನ್ನು ದಾಟಿ ಹೋಗಲು ನನ್ನ ಆತ್ಮ ಒಪ್ಪುತ್ತಿಲ್ಲ.’

‘ಹಾಗಾದರೆ ನನ್ನ ಬಾಲವನ್ನು ಪಕ್ಕಕ್ಕೆ ಸರಿಸಿಹೋಗು.’ ಎಂದು ಹೇಳಿದ ಹನುಮಂತ ಮೌನವಾದನು.

ಆಗ ಭೀಮನು ಇದೇನು ಮಹಾ ಎನ್ನುವಂತೆ ಒಂದು ಕೈನಿಂದ ಪಕ್ಕಕ್ಕೆ ತಳ್ಳಲು ಹೋದ. ಅದನ್ನು ಅತ್ತಿತ್ತ ತಳ್ಳಲು ಆಗಲಿಲ್ಲ. ಎರಡೂ ಕೈಗಳಿಂದ ಪ್ರಯತ್ನಿಸಿ ಸೋತ. ತನ್ನ ಶಕ್ತಿಶಾಲಿ ಗದೆಯಿಂದ ತಳ್ಳಲು ಹೋದ. ಬಾಲವನನ್ನು ಜರುಗಿಸಲು ಶ್ರಮಪಟ್ಟು ಬೆವತು ಹೋದ. ಅವನು ಆ ಬಾಲವನ್ನು ಎತ್ತುವುದಿರಲಿ, ಅಲುಗಾಡಿಸಲೂ ಆಗಲಿಲ್ಲ. ಅವನಿಗೆ ತಾನೇ ಬಲವಂತ ಎಂಬ ಅಹಂಕಾರ ತಗ್ಗಿತು ಗರ್ವಭಂಗವಾಯಿತು. ಆಗ ಹನುಮಂತನಿಗೆ ಕೈ ಮುಗಿದು ಹೀಗೆ ಪ್ರಾರ್ಥಿಸಿಕೊಂಡನು:

‘ವಾನರ ಶ್ರೇಷ್ಠನೆ, ನನ್ನನ್ನು ಕ್ಷಮಿಸು. ತಾವು ಯಾರು?’

‘ನಾನು ವಾಯುಪುತ್ರ. ನನ್ನ ತಾಯಿ ಕೇಸರಿ. ನನ್ನ ಹೆಸರು ಹನುಮಂತ. ನೀನು ನನ್ನ ತಮ್ಮ.’ ಎಂದು ಹೇಳುತ್ತ ಹನುಮಂತನು ಭೀಮನನ್ನು ತಬ್ಬಿಕೊಂಡನು. ಸೌಗಂಧಿಕ ಕನಕಪುಷ್ಕರದ ಮಾರ್ಗ ತಿಳಿಸಿದನು. ಭೀಮನು ಅಲ್ಲಿಗೆ ಹೋಗಿ ಆ ಹೂಗಳನ್ನು ಕಿತ್ತು ತಂದು ದ್ರೌಪದಿಗೆ ನೀಡಿದನು.

■ ಜಿ. ಕೃಷ್ಣಪ್ಪ, ಬೆಂಗಳೂರು

